ಆರ್.ಬಿ.ಐ./2006-2007/280
ಡಿ.ಬಿ.ಓ.ಡಿ. ಸಂಖ್ಯೆ. ಎಲ್ಇಜಿ. ಬಿಸಿ. 65/09.07.005/2006-07 ಮಾರ್ಚ್ 6, 2007

ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು / ಅಖಿಲ ಭಾರತ ವಿತ್ತೀಯ ಸಂಸ್ಥೆಗಳು
ಗ್ರಾಮೀಣ ಬ್ಯಾ0ಕುಗಳನ್ನು ಹೊರತುಪಡಿಸಿ)

ಮಾನ್ಯರೇ,

<u>ಸಾಲ ನೀಡುವವರಿಗೆ ನ್ಯಾಯೋಚಿತ ನಡವಳಿಕೆಗಳ ಸಂಹಿತೆಯ ಬಗ್ಗೆ ಮಾರ್ಗದರ್ಶನಗಳು</u>

ಬ್ಯಾಂಕುಗಳಿಗೆ/ ವಿತ್ತೀಯ ಸಂಸ್ಥೆಗಳಿಗೆ ನ್ಯಾಯೋಚಿತ ನಡವಳಿಕೆ ಸಂಹಿತೆಗಳ ರಚನೆಯ ಸಂಬಂಧ ನೀಡಲಾದ ಸುತ್ತೋಲೆ ಸಂಖ್ಯೆ ಡಿ.ಬಿ.ಓ.ಡಿ. ಎಲ್ಇಜಿ. ನಂ.ಬಿಸಿ. 104/0907.007/2002-03 ದಿನಾಂಕ ಮೇ 5, 2003ನ್ನು ದಯಮಾಡಿ ಗಮನಿಸುವುದು.

2. ಮೇಲೆ ಹೇಳಿದ ಸುತ್ತೋಲೆ ಪ್ಯಾರ 2(i)(ಚಿ) ರಲ್ಲಿ ಸೂಚಿಸಿರುವಂತೆ 2 ಲಕ್ಷ ರೂ.ವರೆಗಿನ ಆದ್ಯತಾ ವಲಯ ಸಾಲಗಳಿಗೆ ಸಂಬಂಧಿಸಿದ ಅರ್ಜಿ ನಮೂನೆಗಳು ಎಲ್ಲ ವಿಷಯಗಳನ್ನು ಒಳಗೊಂಡಿರಬೇಕು ಮತ್ತು ಅರ್ಜಿ ಸಂಸ್ಕರಿಸುವುದಕ್ಕೆ ನಿಗದಿಪಡಿಸಿದ ಶುಲ್ಕ/ದರಗಳು ಇದ್ದಲ್ಲಿ ಸೂಚಿಸಬೇಕು ಹಾಗೂ ಅರ್ಜಿಗಳನ್ನು ತಿರಸ್ಕರಿಸಿದ ಸಂದರ್ಭಗಳಲ್ಲಿ ಅಂತಹ ಶುಲ್ಕಗಳ ಮರುಪಾವತಿ ಬಗೆಗಿನ ವಿವರಗಳು, ಪೂರ್ವ ಪಾವತಿ ಆಯ್ಕೆಗಳನ್ನು ಮತ್ತು ಸಾಲಗಾರನ ಹಿತಾಸಕ್ತಿಗೆ ಬಾಧಕವಾಗುವ ಇತರೆ ಯಾವುದೇ ವಿಷಯಗಳನ್ನು ಒಳಗೊಂಡಿರಬೇಕು. ಇದರಿಂದ ಸಾಲಗಾರನು ಬೇರೆ ಬ್ಯಾಂಕಿನ ಜೊತೆ ತುಲನೆಮಾಡಿ ತನ್ನ ಆಯ್ಕೆಯನ್ನು ತಿಳಿಸಲು ಅನುಕೂಲವಾಗುವುದು.

3. ಹೆಚ್ಚು ಪಾರದರ್ಶಕತೆಯನ್ನು ಸಾಧಿಸುವ ದೃಷ್ಟಿಯಿಂದ ಮತ್ತು ಅನುಭವದ ಹಿನ್ನೆಲೆಯಲ್ಲಿ, ಮೇಲಿನ ಸೂಚನೆಗಳು ಸಾಲಗಾರನ ಸಾಲ ಮೊತ್ತವನ್ನು ಗಣನೆಗೆ ತೆಗೆದುಕೊಳ್ಳದೆ, ಎಲ್ಲಾ ವಿಧದ ಸಾಲದ ಅರ್ಜಿಗಳಿಗೆ ಈ ಮೇಲಿನ ಸೂಚನೆಗಳು ಅನ್ವಯಿಸುತ್ತವೆ. ಬ್ಯಾಂಕುಗಳು/ವಿತ್ತೀಯ ಸಂಸ್ಥೆಗಳು ತಮ್ಮ ಆಡಳಿತ ಮ0ಡಳಿಯ ಅನುಮತಿ ಪಡೆದು ಪಾರದರ್ಶಕ ನೀತಿಯನ್ನು ರೂಪಿಸಬೇಕು.

4. ಮುಂದುವರಿದು ದಿನಾಂಕ ಮೇ 5, 2003ರ ಮೇಲಿನ ಸುತ್ತೋಲೆಯ ಪ್ಯಾರ 2(i)(ಜ) ರ ಅನ್ವಯ 2 ಲಕ್ಷ ರೂ.ಗಳ ಸಣ್ಣ ಸಾಲಗಾರರ ಸಾಲದ ಅರ್ಜಿಗಳನ್ನು ತಿರಸ್ಕರಿಸಿದ ಸಂದರ್ಭದಲ್ಲಿ ಬ್ಯಾಂಕುಗಳು/ವಿತ್ತೀಯ ಸಂಸ್ಥೆಗಳು ಅಂತಹ ತಿರಸ್ಕಾರಕ್ಕೆ ಮುಖ್ಯ ಕಾರಣಗಳನ್ನು ಲಿಖಿತವಾಗಿ ನಿರ್ದಿಷ್ಟ ಅವಧಿಯೊಳಗೆ ಸಾಲಗಾರನಿಗೆ ನೀಡಬೇಕು.

5. ಇದನ್ನು ಪುನರ್ವಿಮರ್ಶಿಸಿ, ಯಾವುದೇ ಮಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಕ್ರೆಡಿಟ್ ಕಾರ್ಡ್ ಅರ್ಜಿಗಳನ್ನು ಒಳಗೊಂಡಂತೆ ಎಲ್ಲಾ ವಿಧದ ಸಾಲದ ಅರ್ಜಿಗಳನ್ನು ತಿರಸ್ಕರಿಸಿದ ಸಂದರ್ಭದಲ್ಲಿ ಅಂತಹ ತಿರಸ್ಕಾರಕ್ಕೆ ಮುಖ್ಯ ಕಾರಣಗಳನ್ನು ಲಿಖಿತವಾಗಿ ಸಾಲಗಾರನಿಗೆ ಬ್ಯಾಂಕುಗಳು/ವಿತ್ತೀಯ ಸಂಸ್ಥೆಗಳು ತಿಳಿಸಬೇಕು.

6. ಮೇಲಿನ ಸೂಚನೆಗಳನ್ನು ಆಧರಿಸಿ ನ್ಯಾಯೋಚಿತ ನಡವಳಿಕೆ ಸಂಹಿತೆಗೆ ಸೂಕ್ತ ತಿದ್ದುಪಡಿಯನ್ನು, ಆಡಳಿತ ಮಂಡಳಿಯ ಅನುಮತಿ ಪಡೆದು ಏಪ್ರಿಲ್ 30, 2007ರ ಒಳಗೆ ತರಬೇಕು. ಹೀಗೆ ಮಾರ್ಪಡಿಸಲಾದ ನ್ಯಾಯೋಚಿತ ನಡವಳಿಕೆ ಸಂಹಿತೆಯನ್ನು ಬ್ಯಾಂಕು/ವಿತ್ತೀಯ ಸಂಸ್ಥೆಗಳ ಅಂತರ್ಜಾಲದಲ್ಲಿ ಪ್ರಕಟಿಸಬೇಕು ಹಾಗೂ ಇದಕ್ಕೆ ವಿಸ್ತೃತ ಪ್ರಚಾರವನ್ನು ನೀಡಬೇಕು.

ತಮ್ಮ ವಿಶ್ವಾಸಿ

(ಪ್ರಶಾಂತ್ ಸರನ್)
ಪ್ರಭಾರಿ ಮುಖ್ಯ ಮಹಾ ವ್ಯವಸ್ಥಾಪಕರು